## 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
## ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ** 5041/2022 ಫ್ರಾಸಾ-9
ಚಾಸಾ-9

ದಿನಾಂಕಃ 11-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಗೋಪಾಲ್ |
| **ತಂದೆಯ / ಗಂಡನ ಹೆಸರು** | ರಂಗಪ್ಪ |
| **ವಯಸ್ಸು** | 45 |
| **ಉದ್ಯೋಗ** | ಮೆಕ್ಯಾನಿಕ್ |
| **ವಾಸಸ್ಥಳ** | ರಮಾಪುರ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ಚಾಸಾ-6 ಮತ್ತು 7 ನನ್ನ ಅಣ್ಣ , ಅತ್ತಿಗೆ. ಅವರಿಗೆ ಇಬ್ಬರು ಮಕ್ಕಳು ಇದ್ದು ಅವರ ಹೆಸರು ಸುದೀಪ ಮತ್ತು ನಿವಾಸ್. ನಿವಾಸ್ 1 ನೇ ತರಗತಿ ಓದುತ್ತಿರುವಾಗ ಹಾವು ಕಚ್ಚಿ ತೀರಿಕೊಂಡಿರುತ್ತಾನೆ. ಸುದೀಪ್ 22 ನೇ ವಯಸ್ಸಿಗೆ ತೀರಿಕೊಂಡಿರುತ್ತಾನೆ. ನಾನು , ಚಾಸಾ-6 , 8 ಮತ್ತು 11 ಬೇರೆ ಬೇರೆ ಮನೆಗಳಲ್ಲಿ ಅಕ್ಕ ಪಕ್ಕದಲ್ಲಿ ಮಾನೆ ಮಾಡಿಕೊಂಡು ವಾಸ ಮಾಡುತ್ತಿದ್ದೇವೆ.

ನನ್ನ ಅಣ್ಣನ ಮಗ, ಆರೋಪಿತರಾದ ಚಲಪತಿ , ಶಿವಕುಮಾರ್ ನಾಗೇಶ ಮತ್ತು ಒಬಳೇಶ್ ಇವರುಗಳು ಜೊತೆಯಲ್ಲಿ ಕೆಲಸಕ್ಕೆ ಹೋಗುತ್ತಿದ್ದರು ಮತ್ತು ಮಲದ ಬೇಟೆಗೆ ಹೋಗುತ್ತಿದ್ದರು. ಯಾಕಾರ್ಲಹಳ್ಳಿ ಅಡವಿಗೆ ಮೊಲದ ಬೇಟೆಗೆ ಹೋಗುತ್ತಿದ್ದರು , ಮೊಲ ಬೇಟಾಯಾಡಿಕೊಂಡು ಹಂಚಿಕೊಂಡು ಅಡಿಗೆ ಮಾಡಿಕೊಂಡು ಊಟ ಮಾಡುತ್ತಿದ್ದರು. ಮೊದಲು ಕೂಡ ಮೊಲ ಬೇಟೆ ಹಂಚಿಕೊಳ್ಳುವ ವಿಷಯದಲ್ಲಿ ಜಗಳ ಮಾಡಿಕೊಂಡಿದ್ದರು. ಆಗ

ನಾವು ಜಗಳವನ್ನು ಬಿಡಿಸಿ ಬುದ್ದಿವಾದ ಹೇಳಿದ್ದೇವು.

ನನ್ನ ಅಣ್ಣ 3 ನೇ ಆರೋಪಿಗೆ ಹೋರಿ ಖರೀದಿಗೆ ದುಡ್ಡು ಕೊಟ್ಟಿದ್ದರು. ಸದರಿ ಹಣವನ್ನು ಸುದೀಪ ನನ್ನ ಅಪ್ಪ ಹಣ ಕೇಳುತ್ತಿದ್ದಾರೆ ಕೊಡಿ ಎಂದು ಕೇಳುತ್ತಿದ್ದ ಆಗ ಅವರು ಕೊಡುತ್ತೇವೆ ಎಂದು ಹೇಳಿ ಬೇಟೆ ಆಡಲು ಸುದೀಪನನ್ನು ಕರೆದುಕೊಂಡು ಹೋಗಿರುತ್ತಾರೆ.

ಈಗ 3 ವರ್ಷಗಳ ಹಿಂದೆ ಆರೋಪಿ ನಾಗೇಶ 7-30 ಕ್ಕೆ ನಮ್ಮ ಮನೆ ಹತ್ತಿರ ಬಂದು ಸುದೀಪನಿಗೆ ಬೇಟೆ ಆಡಲು ಕರೆಯಲು ಬಂದ ಆಗ ಸುದೀಪ್ ಅವನ ಜೊತೆ ಹೋಗುತ್ತಿದ್ದ ನಾನು ಆರೋಪಿ ನಾಗೇಶನಿಗೆ ಹೊತ್ತಿಲ್ಲದ ಹೊತ್ತಿನಲ್ಲಿ ಏಕೆ ಹೊಗುತ್ತೀರಿ ಮತ್ತು ಗಲಾಟೆ ಮಾಡಿಕೊಳ್ಳಬೇಡಿ ಮತ್ತು ಸುದೀಪನಿಗೆ ಹೋಗಬೇಡ ಎಂದು ಹೇಳಿದೆ. ಆಗ ನಾಗೇಶ ಬೇಗ ಹೋಗಿ ಬಂದುಬಿಡುತ್ತೇವೆ ಎಂದು ಹೇಳಿರುತ್ತಾನೆ. ನಾಗೇಶ ಮತ್ತು ಸುದೀಪ ನನಗೆ ಸೇರಿದ ಮೊಟರ್ ಸೈಕಲ್ ಮೇಲೆ ಹೋಗಿರುತ್ತಾರೆ. ನನಗೆ ಅನುಮಾನ ಬಂದು ನಾನು ಬೆಲ್ಲದ ಮರದ ಹತ್ತಿರ ಕೂತಿಕೊಂಡಿದ್ದೆ ಆಗ ಆರೋಪಿ ಚಲಪತಿ , ನಾಗೇಶ, ಶಿವಕುಮಾರ, ಸುದೀಪ ಮತ್ತು ಚಾಸಾ-10 ಓಬಳೇಶ ಎಲ್ಲರೂ ಬೇಟೆಗೆ ಹೋಗುತ್ತಿದ್ದರು. ಆ ಸಮಯದಲ್ಲಿ ಅಲ್ಲಿಯೇ ಕೂತಿದ್ದ ನನ್ನ ಅಣ್ಣ ಹೋಗಬೇಡಿ ಎಂದು ಹೇಳಿದ ಆಗ ಅವರು ಅರ್ಧ ಗಂಟೆಯಲ್ಲಿ ಬರುತ್ತೇವೆ ಎಂದು ಹೇಳಿ ಹೋದರು. ರಾತ್ರಿ 3-00 ಗಂಟೆವರೆಗೂ ಕಾಯ್ದುರೂ ಕೂಡ ಸುದೀಪ ಮನೆಗೆ ವಾಪಸ್ಸು ಬರಲಿಲ್ಲ. ನಂತರ ನಾನು ಹೋಗಿ ನನ್ನ ಅಣ್ಣ ಚಾಸಾ-6 ರವರನ್ನು ಎಬ್ಬಿಸಿ ಸುದೀಪ ಇನ್ನೂ ಬಂದಿಲ್ಲ ಎಂದು ಕೇಳಿದೆ.

ಬೆಳಿಗ್ಗೆ ನನ್ನ ಅಣ್ಣ ಆರೋಪಿ ನಾಗೇಶನ ಮನೆ ಹತ್ತಿರ ಹೋಗಿ ನನ್ನ ಮಗ ಎಲ್ಲಿ ಎಂದು ಕೇಳಿದಾಗ ನಮಗೆ ಬೇಟೆ ಸಿಕ್ಕಿರುವುದಿಲ್ಲ ರಾತ್ರಿಯೇ ವಾಪಸ್ಸು ಬಂದಿರುತ್ತೇವೆ ನಿಮ್ಮ ಮಗನ ಬಗ್ಗೆ ನಮಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ನನ್ನ ಅತ್ತಿಗೆ ಚಾಸಾ-7 ಆರೋಪಿ ನಾಗೇಶನಿಗೆ ಸುದೀಪನ ಬಗ್ಗೆ ಕೇಳಿದಾಗ ನನಗೆ ಗೊತಿಲ್ಲ ರಾತ್ರಿ 10-00 ಗಂಟೆಗೆ ವಾಪಸ್ಸು ಬಂದಿರುತ್ತೇವೆ. ನಮ್ಮ ಜೊತೆ ಸುದೀಪ್ ಬಂದಿರುವುದಿಲ್ಲ ಎಂದು ಹೇಳಿರುತ್ತಾರೆ. ನಂತರ ನನ್ನ ತಾಯಿ ಮತ್ತು ನಾವು ಹೋಗಿ ಸುದೀಪನ ಬಗ್ಗೆ ಕೇಳಿದಾಗ ನಮಗೆ ಗೊತ್ತಿಲ್ಲ ಎಂದು ಉತ್ತರ ಕೊಟ್ಟಿರುತ್ತಾರೆ.

ನಂತರ ನಮಗೆ ಅನುಮಾನ ಬಂದು ನಮ್ಮ ಸ್ನೇಹಿತರನ್ನು ಮತ್ತು ಪರಿಚಿತರನ್ನು ವಿಚಾರಿಸಿದಾಗ ಆರೋಪಿ ನಾಗೇಶನೊಂದಿಗೆ ಸುದೀಪ್ ಹೋಗಿರುತ್ತಾನೆಂದು ಹೇಳಿರುತ್ತಾರೆ , ನಾನು ಜಮೀನಿನ ಬಳಿ ಹೋಗಿ ವಿಚಾರಿಸಿರುತ್ತೇವೆ ಅಲ್ಲಿ ಕೂಡ ಸುದೀಪ ಆರೋಪಿತರ ಜೊತೆ ಹೋಗಿರುವುದಾಗಿ ತಿಳಿಸಿರುತ್ತಾರೆ. ಶನಿವಾರ ಮೃತ ಸುದೀಪ ಆರೋಪಿತರ ಜೊತೆ ಬೇಟೆಗೆ ಹೋಗಿದ್ದ ವಾಪಸ್ಸು ಬಂದಿರುವುದಿಲ್ಲ, ಸೋಮವಾರ ವಾಟ್ಸ್ ಅಫ್ ಗ್ರೂಪ್ ನಲ್ಲಿ ಕೊಡಿಗೇನಹಳ್ಳಿ ಪೊಲೀಸರು ನನ್ನ ಮಗನ ಶವದ ಪೊಟೋ ಹಾಕಿದ್ದರು. ಸದರಿ ಪೊಟೋವನ್ನು ನನ್ನ ವಾಟ್ಸ್ ಅಫ್ , ನನ್ನ ತಮ್ಮ ಪುಟ್ಟರಂಗಯ್ಯ ರವರ ವಾಟ್ಸ್ ಅಫ್ ಮತ್ತು ನನ್ನ ಅಣ್ಣನ ವಾಟ್ಸ್ ಅಫ್‌ಗೆ ಪೊಲೀಸರು ಕಳುಹಿಸಿರುತ್ತಾರೆ. ಆ ದಿನ ಕತ್ತಲು ಆಗಿದ್ದರಿಂದ ಮರು ದಿನ ಮಂಗಳವಾರ ಕೊಡಿಗೇನಹಳ್ಳಿ ಪೊಲೀಸ್ ಠಾಣೆಗೆ ಹೋಗಿ ವಿಚಾರಿಸಿದಾಗ ಯಾಕಾರ್ಲಹಳ್ಳಿ ಸೋಲಾರ್ ಬಳಿ ಯಾರೋ ಬುಲೇರೋ ಮೋಟಾರ್ ಬೈಕ್ ನಲ್ಲಿ ಸುದೀಪನಿಗೆ ಹೊಡೆದು ಹೋಗಿರುತ್ತಾರೆ ಶವವನ್ನು ತುಮಕೂರು ಸರ್ಕಾರಿ ಆಸ್ಪತ್ರೆಗೆ ಸಾಗಿಸಿರುತ್ತಾರೆಂದು ತಿಳಿಸಿರುತ್ತಾರೆ.

ನಾನು ತುಮಕೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಶವ ನೋಡಿದಾಗ ತಲೆ ಹಿಂಭಾಗದಲ್ಲಿ ಮುಖದ ಎಡ ಭಾಗದಲ್ಲಿ ಮತ್ತು ಮರ್ಮಸ್ಥಾನಕ್ಕೆ ಗಾಯ ಆಗಿರುವುದು ಕಂಡುಬಂದಿರುತ್ತದೆ. ಸದರಿ ಶವವನ್ನು ನೋಡಿ ಮತ್ತು ಗಾಯಗಳನ್ನು ನೋಡಿ ಕೊಲೆ ಎಂದು ಅನುಮಾನ ಬಂದು ನಾನು ಪೊಲೀಸರಿಗೆ ಇದು ಅಪಘಾತವಲ್ಲ ಕೊಲೆ ಎಂದು ಅನುಮಾನ ಇದೆ ಎಂದು ಹೇಳಿರುತ್ತೇನೆ. ಶವವನ್ನು ನೋಡಿದಾಗ ಬಟ್ಟೆ ಎಲ್ಲಿಯೂ ಹರಿದಿರುವುದಿಲ್ಲ. ಚಾಸಾ-11 ರವರು ಈ ಬಗ್ಗೆ ಪಿರ್ಯಾದಿ ಕೊಟ್ಟಿರುತ್ತಾರೆ. ಅದಕ್ಕೆ ಮೊದಲು ಬೇರೆ ಯಾರು ರಸ್ತೆ ಅಪಘಾತ ಎಂದು ಪಿರ್ಯಾದಿ ಕೊಟ್ಟಿದ್ದರು. ಪೊಲೀಸರು ತನಿಖೆ ಮಾಡಿ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು. ನಂತರ ಶವವನ್ನು ಪಡೆದುಕೊಂಡಿರುತ್ತೇವೆ.

**ಚಾಸಾ-9**

ಬೇಟೆಗೆ ಉಪಯೋಗಿಸುವ ಬಂದೂಕಿನಿಂದ 3 ಜನ ಆರೋಪಿತರು ಮತ್ತು ಚಾಸಾ-10 ರವರು ಸುದೀಪನಿಗೆ ಹೊಡೆದು ಸಾಯಿಸಿದ್ದಾರೆಂದು ಗೊತ್ತಾಗಿರುತ್ತದೆ. ಶವವನ್ನು ಅಪಘಾತವಾಗಿದೆ ಎಂದು ಬಿಂಬಿಸಲು ಯಾಕಾರ್ಲಹಳ್ಳಿಯ ಸೋಲಾರ್ ಪಾಯಿಂಟ್‌ನ ಟಾರ್ ರಸ್ತೆಯಲ್ಲಿ ಶವವನ್ನು ಮತ್ತು ಮೊಟಾರ್ ಸೈಕಲ್ ಹಾಕಿರುತ್ತಾರೆ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಸೊಲಾರ್ ಪಾಯಿಂಟ್ ನ ಬಳಿ ಮೊಟಾರ್ ಸೈಕಲ್ ನ ಇಂಡಿಕೇಟರ್ ಮತ್ತು ಡೂಂ ಹೊಡೆದು ಹೋಗಿತ್ತು. ಸುದೀಪ್ ಬಳಸುತ್ತಿದ್ದ ಗಾಡಿ ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ 4 ಪೊಟೋಗಳನ್ನು ನೋಡಿದ್ದು, ಅದರಲ್ಲಿ ಮೋಟಾರ್ ಬೈಕ್ ಇರುವಿಕೆಯನ್ನು ಗುರುತಿಸಿರುತ್ತಾರೆ, ಸದರಿ ಪೊಟೋಗಳನ್ನು ನಿಪಿ-16 ರಿಂದ 19 ಎಂದು ಗುರುತಿಸಲಾಯಿತು. ಸುದೀಪನ ಸಾವಿಗೆ ಮೂರು ಜನ ಆರೋಪಿತರು ಮತ್ತು ಚಾಸಾ-10 ಕಾರಣರಾಗಿರುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು)**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**